3 **ವಿದ್ಯುತ್ ವಿಭಾಗದ ಬಗ್ಗೆ:-**

- ಶ್ರೀ ರವೀಶ್ ವಾರ್ಡ್‌ನ ನಾಗರೀಕರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಲಕ್ಷ್ಮೀನಗರದ ಶನಿ ಮಹಾತ್ಮ ದೇವಸ್ಥಾನದ ಬಳಿಯಿರುವ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸ್ಥಳ ಪರಿಶೀಲಿಸಿ ಶೀಘ್ರವಾಗಿ ದುರಸ್ಥಿ ಕಾರ್ಯವನ್ನು ಕೈಗೊಳ್ಳುವಂತೆ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯ ಬೀದಿ ದೀಪಗಳ ನಿರ್ವಹಣಾ ಗುತ್ತಿಗೆದಾರರ ಪರವಾಗಿ ಹಾಜರಿದ್ದ ಶ್ರೀ ಅಬ್ದುಲ್ ರವರಿಗೆ ತಿಳಿಸಿದರು.
- ಶ್ರೀ ಅಬ್ದುಲ್, ಬೀದಿ ದೀಪಗಳ ನಿರ್ವಹಣಾ ಗುತ್ತಿಗೆದಾರರು ರವರು ಮಾತನಾಡುತ್ತಾ, ಸದರಿ ಸ್ಥಳವನ್ನು ಪರಿಶೀಲಿಸಿ ಶೀಘ್ರವಾಗಿ ಸಮಸ್ಯೆಯನ್ನು ಬಗೆಹರಿಸಲಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು.

4 **ಪಶುಪಾಲನೆ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸಲು ಸೂಕ್ತ ಕ್ರಮವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಲೋಕೇಶ್ ಕೆ.ವಿ. ಹಿರಿಯ ವೆಟರಿನರಿ ಪರಿವೀಕ್ಷಕರು ರವರಿಗೆ ತಿಳಿಸಿದರು.
- ಶ್ರೀ ಲೋಕೇಶ್ ಕೆ.ವಿ. ಹಿರಿಯ ವೆಟರಿನರಿ ಪರಿವೀಕ್ಷಕರು ರವರು ಮಾತನಾಡುತ್ತಾ, ಬೀದಿ ನಾಯಿಗಳಿಗೆ ಸಂಬಂಧಿಸಿದಂತೆ ದೂರುಗಳು ಬಂದ ತಕ್ಷಣ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯಚರಣೆ ನಡೆಸಲಾಗುತ್ತಿದ್ದು, ಪ್ರತಿ ಬಾರಿ ಕಾರ್ಯಾಚರಣೆ ಕೈಗೊಂಡಾಗ ವಾಟ್ಸ್‌ಆಪ್‌ನಲ್ಲಿ ವರದಿ ಮಾಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

5 **ತೋಟಗಾರಿಕೆ ವಿಭಾಗದ ಬಗ್ಗೆ:-**

- ಸಭಾಕಾರ್ಯದರ್ಶಿ ರವರು ಮಾತನಾಡುತ್ತಾ, ಶ್ರೀ. ಎನ್. ಮಂಜುನಾಥ್, ಮೇಸ್ತ್ರಿ, ತೋಟಗಾರಿಕೆ ಇಲಾಖೆ ಯವರು ಕೋವಿಡ್ ಲಸಿಕೆಯನ್ನು ಪಡೆಯಲು ಹೋಗಿರುವುದರಿಂದ ಸಭೆಯಲ್ಲಿ ಹಾಜರಾಗಲು ಆಗುವುದಿಲ್ಲ, ಹಾಗೂ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಯಾವುದಾದರೂ ದೂರುಗಳು ಕಂಡಬಂದಲ್ಲಿ ಮೇಲಾಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ ಸೂಕ್ತ ಕ್ರಮವಹಿಸುವುದಾಗಿ ದೂರವಾಣಿಯ ಮುಖಾಂತರ ತಿಳಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

6 **ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-**

- ಶ್ರೀ ಆರ್. ಮಂಜುನಾಥ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, 20ನೇ ಮುಖ್ಯರಸ್ತೆಯ ಕೊನೆಯಲ್ಲಿ ಬೃಹತ್ ನೀರುಗಾಲುವೆಯ ಬಳಿಯಲ್ಲಿ ಹೆಚ್ಚು ಕಸ ಬಿದ್ದಿರುವುದಾಗಿ ಸಭೆಯಲ್ಲಿ ದೂರಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಘ.ತ್ಯಾ.ನಿ., ಮಲಮ ವಿಭಾಗ ಅಥವಾ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ಕ್ರಮವಹಿಸುವಂತೆ ತಿಳಿಸುವಂತೆ ಸಭಾಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.

7 **ಅರಣ್ಯ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಅಪಾಯದ ಸ್ಥಿತಿಯಲ್ಲಿರುವ ಮರದ ರೆಂಬೆಗಳು ಅಥವಾ ಜೋತಾಡುತ್ತಿರುವ ರೆಂಬೆಗಳು ಹಾಗೂ ಸಾರ್ವಜನಿಕರು ದೂರು ನೀಡಿದ ತಕ್ಷಣ ರೆಂಬೆಗಳನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸಭೆಯಲ್ಲಿ ಹಾಜರಿದ್ದ, ಶ್ರೀ ಮಲ್ಲಪ್ಪ, ಮೇಸ್ತ್ರಿ, ಅರಣ್ಯ ಇಲಾಖೆ ರವರಿಗೆ ಸಭೆಯಲ್ಲಿ ತಿಳಿಸಿರು.

8 **ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:-**

- ಶ್ರೀ ರವೀಶ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ಜೆ.ಸಿ.ನಗರದ 15ನೇ ಮುಖ್ಯರಸ್ತೆಯ 4ನೇ ಅಡ್ಡರಸ್ತೆಯ ಬಳಿಯಲ್ಲಿ ಒಳಚರಂಡಿ ಲೈನ್ ಹಾಳಾಗಿರುವುದರಿಂದ ರಸ್ತೆಯ ಒಳಭಾಗದ ಮಣ್ಣು ಕೊರೆದು ದೊಡ್ಡ ಗುಂಡಿಯಾಗಿ ಮಾರ್ಪಾಡಾಗಿರುವುದಾಗಿದ್ದು, ಈ ಬಗ್ಗೆ ಇನ್ನೂ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಸ್ಥಳವನ್ನು ಪರಿಶೀಲಿಸಿ ಶೀಘ್ರವಾಗಿ ಸೂಕ್ತ ಕ್ರಮ ತೆಗೆದುಕೊಂಡು ರಸ್ತೆಯ ಗುಂಡಿಯ ಮನಃಸ್ಥಾಪನೆಯನ್ನು ಶೀಘ್ರವಾಗಿ ಮಾಡಬೇಕಾಗಿ ಶ್ರೀಹನುಮಂತ ವಿ. ಕಾಮಗಾರಿ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ ತಿಳಿಸಿದರು.

ಮು.ತಿ.ನೋ.

Scanned by CamScanner

Ward 75 ward committee meeting dt - 01-05-2021

| ಕ್ರ. ಸಂ. | ಹೆಸರು | ಪದನಾಮ | ಇಲಾಖೆ | ಮೊ. ಸಂ. | ಸಹಿ |
|---|---|---|---|---|---|
| (1). | R. Manjunath. | Public | | 9844158171 | [signature] |
| (2) | Hanumantha. V | WI | B.W.S.S.B | 8050961166 | VH |
| (3) | Vinod. S | Marshal | BBMP | 9663084662 | [signature] |
| (4) | Gangadharachari J | marshal | B.B.M.P | 6363222195 | [signature] |
| 5 | LOKESHA. K.V | Sr VI | Animal Husbandry | 9480683056 | [signature] |
| 6 | Hemanth | Public | B.B.M.P | 7676145987 | [signature] |
| 7 | Puttaswamy | AE | BBMP | 7483162130 | [signature] |
| 8 | ರವಿ BC | | | 6361780657 | Ravi BC |
| 9) | Abdulla | | | 6366663973 | ABDULLA |
| 10) | G.R. Govindrajulu | SHI | BBMP | 9845512187 | G.R. [signature] |
| 11) | Mallappa | wlre ಶ್ರೀ | Forest dept BBMP | 9480683341 | ಮಲ್ಲಪ್ಪ |
| (12) | Rajeswari G. | Teacher | Education | 9620198570 | Rajeswari G. |

Scanned by CamScanner